ಔರಾದ್ ತಾಲ್ಲೂಕಿನಲ್ಲಿ ಅಗ್ನಿಶಾಮಕ ದಳ ಕಛೇರಿ.

3012(3762)

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಗೃಹ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಎ.ಪಿ.ಎಂ.ಸಿ. ಪ್ರಾಂಗಣದಲ್ಲಿ ಷೆಡ್ ಹಾಗೂ ಕಛೇರಿಗಾಗಿ ಕಟ್ಟಡ ನಿರ್ಮಾಣವಾಗಿ 2 ವರ್ಷವಾದರೂ ಇನ್ನು ಅಗ್ನಿಶಾಮಕ ವಾಹನ ಹಾಗೂ ಸಿಬ್ಬಂದಿ ವ್ಯವಸ್ಥೆ ಆಗಿಲ್ಲದಿರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ ಮತ್ತು ಆ) 1996ನೇ ಸಾಲಿನಲ್ಲಿ ಔರಾದ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆ ಮಂಜೂರಾಗಿದೆ. ಈ ಅಗ್ನಿಶಾಮಕ ಠಾಣೆಗೆ ಒಂದು ಅಗ್ನಿಶಾಮಕ ವಾಹನವನ್ನು ನಿಗದಿಪಡಿಸಲಾಗಿದೆ. ಬೇಕಾಗಿರುವ ಸಿಬ್ಬಂದಿಯವರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ದೇವಾಲಯಗಳ ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಿದ ಹಣ.

3014(3636)

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್(ರೋಣ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

1. ಮುಜರಾಯಿ ಇಲಾಖೆಯಿಂದ ಕಳೆದ 3 ವರ್ಷಗಳಿಂದ ದೇವಾಲಯಗಳ ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಿದ ಒಟ್ಟು ಅನುದಾನವೆಷ್ಟು? (ಅನುದಾನದ ಪಟ್ಟರ ತಾಲ್ಲೂಕುವಾರು ನೀಡುವುದು)

2. ರೋಣ ತಾಲ್ಲೂಕಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು?

3. ಆರಾಧನಾ ಯೋಜನೆಯಡಿ ಕಳೆದ 3 ವರ್ಷಗಳಿಂದ ಬಿಡುಗಡೆ ಮಾಡಿದ ಒಟ್ಟು ಅನುದಾನವೆಷ್ಟು? (ತಾಲ್ಲೂಕುವಾರು ಪಟ್ಟರ ನೀಡುವುದು)

4. ಆರಾಧನಾ ಸಮಿತಿ ರಚನೆ ಹಾಗೂ ಅನುದಾನ ಬಿಡುಗಡೆ ಸರಕಾರಕ್ಕೆ ಇರುವ ಅಡಚಣೆಗಳೇನು?

ಶ್ರೀ ಬಾಬುರಾವ್ ಚಿಂಚನೂರು (ಮುಜರಾಯಿ ಸಚಿವರು):

1. ಕಳೆದ ಮೂರು ವರ್ಷಗಳಿಗೆ ದೇವಾಲಯದ ಜೀರ್ಣೋದ್ಧಾರಕ್ಕೆ ಜಿಲ್ಲಾವಾರು ಬಿಡುಗಡೆ ಮಾಡಿದ ಹಣ ಎಷ್ಟರ ಈ ಕೆಳಕಂಡಂತಿದೆ. (ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡುವುದಿಲ್ಲ.)

ಜಿಲ್ಲೆ	1998-1999	1999-2000	2000-2001
	(ರೂ. ಲಕ್ಷಗಳಲ್ಲಿ)		
1. ಕೊಪ್ಪಳ	-	1.50	0.60
2. ಬೆಂಗಳೂರು(ನಗರ)	-	4.30	6.00
3. ಬೆಂಗಳೂರು(ಗ್ರಾಮಾಂತರ)	6.95	7.00	6.10
4. ತುಮಕೂರು	-	5.80	5.45
5. ಕೋಲಾರ	19.50	8.75	6.90
6. ದಾವಣಗೆರೆ	4.30	2.55	0.80
7. ಮೈಸೂರು	17.75	3.00	5.50
8. ಮಂಡ್ಯ	5.80	8.00	9.50
9. ದಕ್ಷಿಣ ಕನ್ನಡ	8.45	14.00	8.00
10. ಕೊಡಗು	-	9.50	3.50
11. ಹಾಸನ	11.55	4.15	6.75
12. ಚಿಕ್ಕಮಗಳೂರು	9.05	3.25	3.70
13. ಶಿವಮೊಗ್ಗ	-	4.25	2.00

14. ಬೆಳಗಾವಿ	-	3.55	3.50
15. ಧಾರವಾಡ	10.45	0.25	0.50
16. ಬಿಜಾಪುರ	10.10	2.00	3.00
17. ಉತ್ತರ ಕನ್ನಡ	10.80	3.70	2.10
18. ಗುಲ್ಬರ್ಗಾ	-	20.05	22.00
19. ಬಳ್ಳಾರಿ	-	3.90	1.00
20. ರಾಯಚೂರು	-	1.50	1.60
21. ಬೀದರ್	11.30	3.75	1.50
22. ಚಾಮರಾಜನಗರ	-	1.20	0.40
23. ಬಾಗಲಕೋಟೆ	2.05	2.05	1.00
24. ಉಡುಪಿ	-	3.25	21.00
25. ಗದಗ್	14.40	2.25	1.50
26. ಹಾವೇರಿ	12.20	1.50	1.50
27. ಚಿತ್ರದುರ್ಗ	15.35	1.00	0.60
	1.70,00,000/-	1,26,00,000/-	1,26,00,000/-

2. ಕಳೆದ 3 ವರ್ಷಗಳಲ್ಲಿ ರೋಣ ತಾಲ್ಲೂಕಿಗೆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಿದ ಏವರ ಈ ಕೆಳಕಂಡಂತಿದೆ:

ವರ್ಷ	ಸಂಖ್ಯೆ	ಮೊತ್ತ
1998-1999	21	8,45,000-00

1999-2000	1	50,000-00
2000-2001	1	50,000-00

3. ಈ ಯೋಜನೆಯಡಿ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡುವುದಿಲ್ಲ. ಏಧಾನ ಸಭಾ ಕ್ಷೇತ್ರವಾರು ಸಮಾನವಾಗಿ ಹಂಚಿಕೆ ಮಾಡಲಾಗುವುದು. 3 ವರ್ಷಗಳ ಏವರ ಈ ಕೆಳಕಂಡಂತಿದೆ:

ವರ್ಷ	ಮೊತ್ತ	ಪ್ರತಿ ಕ್ಷೇತ್ರಕ್ಕೆ
1998-1999	5,00,00,000-00	2,17,391
1999-2000	4,00,00,000-00	1,73,913
2000-2001	5,00,00,000-00	1,95,652

4. ಆರಾಧನಾ ಸಮಿತಿ ರಚನೆಗೆ ಆಯಾ ಏಧಾನ ಸಭಾ ಸದಸ್ಯರಿಂದ ಮತ್ತು ಜಿಲ್ಲಾಧಿಕಾರಿಗಳಿಂದ ಬಂದ ಪ್ರಸ್ತಾವನೆಯಂತೆ ಸಮಿತಿ ರಚಿಸಲಾಗುವುದು. ಅನುದಾನವನ್ನು ಆರ್ಥಿಕ ಇಲಾಖೆಯು ಬಿಡುಗಡೆ ಮಾಡಿದ ತಕ್ಷಣ ಏಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗುವುದು.

ಸರ್ಕಾರಿ ಹುದ್ದೆಗಳನ್ನು ಕಡಿತಗೊಳಿಸುವುದು.

3015(3642)

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್(ರೋಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಆಡಳಿತ ಸುಧಾರಣಾ ಆಯೋಗ (ಶ್ರೀ ಹಾರನಹಳ್ಳಿ ರಾಮಸ್ವಾಮಿ ಆಯೋಗ) ನೀಡಿದ ವರದಿಯಂತೆ ಕೆಲ ಹುದ್ದೆಗಳನ್ನು ರದ್ದುಪಡಿಸುವ ನಿರ್ಧಾರದ ಹಿನ್ನೆಲೆಯಲ್ಲಿ ಈಗಾಗಲೇ ರದ್ದು ಪಡಿಸಲು ಗುರುತಿಸಿದ ಹುದ್ದೆಗಳು ಯಾವುವು? ಅವುಗಳ ಸಂಖ್ಯೆ ಎಷ್ಟು?

2) ರದ್ದು ಪಡಿಸಲು ಸರ್ಕಾರ ಹಾಕಿಕೊಂಡ ಮಾನದಂಡವೇನು?

3) ಹುದ್ದೆಗಳನ್ನು ರದ್ದು ಪಡಿಸುವುದರಿಂದ ಉಳಿತಾಯವಾಗುವ ಮೊತ್ತವೆಷ್ಟು?